ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) **ಜನಾರ್ಧನಹಳ್ಳಿ** ಜನಾರ್ಧನಹಳ್ಳಿ ಗ್ರಾಮದಲ್ಲಿ ಮನೆಗಳು ಶೀತಪೀಡಿತವಾಗಿಲ್ಲವೆಂದು ಹಾಗೂ ಮನೆಗಳನ್ನು ತೇವಾಂಶರಹಿತವಾಗಿ ಮಾಡಲು ಸೂಕ್ತ ಚರಂಡಿ ನಿರ್ಮಾಣ ಮಾಡಿದಲ್ಲಿ ಗ್ರಾಮವನ್ನು ಸ್ಥಳಾಂತರಿಸುವ ಅಗತ್ಯವಿರುವುದಿಲ್ಲವೆಂದು ವಿಭಾಗಾಧಿಕಾರಿ ಮೈಸೂರು ಇವರ ಅಧ್ಯಕ್ಷತೆಯಲ್ಲಿನ ಸಮಿತಿಯು ದಿನಾಂಕ 22 10 1997 ರಂದು ಸ್ಥಳ ಪರಿಶೀಲನೆ ಮಾಡಿ ನೀಡಿದ ವರದಿಯ ಹಿನ್ನೆಲೆಯಲ್ಲಿ ಜನಾರ್ಧನಹಳ್ಳಿ ಗ್ರಾಮವನ್ನು ಮನರ್ವಸತಿಗೊಳಿಸಿರುವುದಿಲ್ಲ

ಕಟ್ಟೆಪುರ ಕಟ್ಟೆಪುರ ಗ್ರಾಮವನ್ನು ಹಿಂದೆ ಯಲಕನೂರು ಪುನರ್ವಸತಿ ಕಾಲೋನಿಗೆ ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲಾಗಿದೆ

ಆ) ಜನಾರ್ಧನಹಳ್ಳಿ ಪುನರ್ವಸತಿಗಾಗಿ 6 ಎಕರೆ ಜಾಗವನ್ನು ಕಾಯ್ದಿರಿಸಲಾಗಿದ್ದು, ದಿನಾಂಕ 24 11 2006 ರಂದು ಕಂದಾಯ ಇಲಾಖೆಯು ಸೂಚಿಸಿದಂತೆ ಕಂದಾಯ ಇಲಾಖೆ ಹಾಗೂ ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳ ಜಂಟಿ ತಪಾಸಣಾ ವರದಿ ನೀಡಿದ ನಂತರ ಅಗತ್ಯ ಕ್ರಮ ಕೈಗೊಳ್ಳಲಾಗುವುದು

492(860) ಶ್ರೀ ಜೀವಿಜಯ ಬಿ ಎ (ಸೋಮವಾರಪೇಟೆ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ,

ಅ) ಕೇಂದ್ರ ಸರ್ಕಾರದಿಂದ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಬರುವ ರಸ್ತೆಗಳಿಗೆ ರಾಜ್ಯ ಸರ್ಕಾರಕ್ಕೆ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ, ನಿಗದಿಪಡಿಸಲಾದ ಹಣವನ್ನು ರಾಜ್ಯ ಸರ್ಕಾರ ಯಾವ ಕಾರಣಕ್ಕಾಗಿ ಪಡೆಯಲಾಗಲಿಲ್ಲ?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕೇಂದ್ರ ಸರ್ಕಾರವು ರಾಜ್ಯದ ಗ್ರಾಮೀಣ ರಸ್ತೆ ಸಂಪರ್ಕ ಜಾಲವನ್ನು ಆಧರಿಸಿ ಅನುದಾನ ನಿಗದಿಗೊಳಿಸುತ್ತದೆ ರಾಜ್ಯ ಸರ್ಕಾರಕ್ಕೆ ರೂ 95 00 ಕೋಟಿ ವಾರ್ಷಿಕ

ಅನುದಾನ ನಿಗದಿಯಾಗಿದ್ದು, 2004–05ನೇ ಸಾಲಿನಿಂದ ರೂ 105 00 ಕೋಟಿಗಳಿಗೆ ಹೆಚ್ಚಿಸಲಾಗಿದೆ ಈ ಯೋಜನೆಯಡಿ ಹಂತವಾರು ಪಡೆದ ಅನುಮೋದನೆಯ ವಿವರಗಳು ಕೆಳಕಂಡಂತಿದೆ

ಕ್ರಮ ಸಂಖ್ಯೆ	ಹಂತ	ನಿಗದಿಪಡಿಸಿದ ಮೊತ್ತ (ಮಂಜೂರಾದ ಕಾಮಗಾರಿಗಳ ಮೊತ್ತ) (ರೂ ಕೋಟಿಗಳಲ್ಲಿ)
1	I	105 63
2	II	231 76
3	III	118 26
4	IV	101 17
5	V-ಬ್ಯಾಚ್-I	110 83
6	V-ಬ್ಯಾಚ್-II	91 70
7	VI	330 72
ಒಟ್ಟು		**1090.07**

ಈವರೆವಿಗೆ ಕೇಂದ್ರದಿಂದ ರೂ 506 23 ಕೋಟಿ ಬಿಡುಗಡೆಯಾಗಿದ್ದು ರೂ 465 38 ಕೋಟಿ ವೆಚ್ಚ ಭರಿಸಲಾಗಿದೆ 2006–07ನೇ ಸಾಲಿನಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಒಟ್ಟಾರೆಯಾಗಿ ರೂ 121 36 ಕೋಟಿಗಳ ಅನುದಾನ ಲಭ್ಯವಿದ್ದು, ಇದರಲ್ಲಿ ಕೇಂದ್ರದ ಯೋಜನಾ ನಿಧಿಯು ರೂ 109 26 ಕೋಟಿ ಇರುತ್ತದೆ ಈ ಮೊತ್ತದಲ್ಲಿ ರೂ 63 26 ಕೋಟಿಗಳು ಇದುವರೆಗೆ ವೆಚ್ಚವಾಗಿರುತ್ತದೆ

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ನಿಯಮಾವಳಿಗಳಂತೆ ಪ್ರಸಕ್ತ ಸಾಲಿನ ಪ್ರಾರಂಭದಲ್ಲಿರುವ ಅನುದಾನದ ಶೇಕಡಾ 60ರಷ್ಟು ವೆಚ್ಚವನ್ನು ಭರಿಸಿದ ಮೇಲೆ ಎರಡನೇ ಕಂತನ್ನು ಬಿಡುಗಡೆ ಮಾಡಲಾಗುತ್ತದೆ ಪ್ರಸ್ತುತ ಶೇಕಡಾ 60ರಷ್ಟು ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದ್ದು, ಹಂತ–4ರ ಎರಡನೇ ಕಂತು ರೂ 50 59 ಕೋಟಿ ಹಾಗೂ ಹಂತ–5–ಬ್ಯಾಚ್–1 ಮತ್ತು 2ರ ಮೊದಲನೇ ಕಂತು ರೂ 101 26 ಕೋಟಿ ಒಟ್ಟು ರೂ 151 85 ಕೋಟಿಗಳ

ಅನುದಾನವನ್ನು ಬಿಡುಗಡೆ ಮಾಡಲು ದಿನಾಂಕ 19 1 2007ರಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು ಅನುದಾನದ ಬಿಡುಗಡೆ ನಿರೀಕ್ಷಣೆಯಲ್ಲಿದೆ

493(861) ಶ್ರೀ ಜೀವಿಜಯ ಬಿ ಎ (ಸೋಮವಾರಪೇಟೆ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ,

ಅ) ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಕೂಡಿಗೆ ಮತ್ತು ಆಳವಾರದಲ್ಲಿ ಸೈನಿಕ ಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನ ಕೂಡಿಗೆಯಲ್ಲಿ ಹೊಸದಾಗಿ ಸೈನಿಕ ಶಾಲೆ ಪ್ರಾರಂಭಿಸಲು MOA, (Memorandum of Agreement) ಕೇಂದ್ರ ರಕ್ಷಣಾ ಮಂತ್ರಾಲಯದಿಂದ ನಿರೀಕ್ಷಿಸಲಾಗುತ್ತಿದೆ ಸದರಿ ಮೆಮೊರ್ಯಾಂಡಮ್‌ನ್ನು ಸಹಿ ಮಾಡಿದ ನಂತರ ಸದರಿ ಶಾಲೆಯನ್ನು ಪ್ರಾರಂಭಿಸಲು ಸೂಕ್ತ ಕ್ರಮ ಜರುಗಿಸಲಾಗುವುದು

ಆಳವಾರದಲ್ಲಿ ಸೈನಿಕ ಶಾಲೆಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ

494(862) ಶ್ರೀ ಬಿ ಎ ಜೀವಿಜಯ (ಸೋಮವಾರಪೇಟೆ ಕ್ಷೇತ್ರ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ,

ಅ) ಕೊಡಗು ಮತ್ತು ಮಲೆನಾಡಿನ ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ರಾಜ್ಯ ಸರ್ಕಾರ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಕೊಡಗು ಮತ್ತು ಮಲೆನಾಡಿನ ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ 5054–ರಸ್ತೆ